**ಪಿಡಬ್ಲೂಃ 1** **ಅಸಲು ದಾವೆ ನಂ. 282/2016**

ದಿನಾಂಕ **21-11-2022** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎನ್.ಕೆ.ಡಿ. ಪ್ರತಿವಾದಿ ಪರ ವಕೀಲರಿಂದಃ</u>-**

ನಾನು ಡಿಪ್ಲೋಮಾ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಇಂಜಿನಿಯರ್ ಅಂತ ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆಗೆ ಈಗ 70 ವರ್ಷ ವಯಸ್ಸು. ವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತು.

2016 ರಲ್ಲಿ ಸಲ್ಲಿಸಿದ ವಾದಪತ್ರದಲ್ಲಿ ನನ್ನ ತಂದೆಯ ವಯಸ್ಸು 57 ಎಂದು ನಮೂದು ಇದೆ ಎಂದರೆ ಸರಿ.

ನನ್ನ ತಂದೆ ಊರಿನಲ್ಲಿ ವ್ಯವಸಾಯ ಮಾಡಿಕೊಂಡು ಆರೋಗ್ಯವಾಗಿ ಇದ್ದಾರೆ ಎಂದರೆ ಸಾಕ್ಷಿಯು ಅವರಿಗೆ ಈಗ ವಯಸ್ಸಾಗಿದೆ, ಆರೋಗ್ಯ ಚೆನ್ನಾಗಿದೆ ಎನ್ನುತ್ತಾರೆ.

ನಿ.ಪಿ.16 ರಲ್ಲಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ.16 ರಲ್ಲಿರುವ ಎಲ್ಲಾ ಸಂಗತಿಗಳು ಸರಿಯಾಗಿದೆ ಎಂದರೆ ಸರಿ.

ನಿ.ಪಿ.11 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತು, ಯಾವುದಕ್ಕೆ ನಿ.ಪಿ.11 ನ್ನು ಸಲ್ಲಿಸಿದ್ದರು ಎಂಬುದು ನನಗೆ ಗೊತ್ತು, ಆದರೆ ಅದರಲ್ಲಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ನಿ.ಪಿ.11 ನ್ನು ಸರ್ವೇ ನಂಬರ್ 81/ಪಿ36 ಕ್ಕೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ದಾವೆ ಹೂಡಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಸಾಕ್ಷಿ ವಿಚಾರಣೆ ಆಗಿತ್ತು ಎಂದರೆ ಸಾಕ್ಷಿಯು ವಾದಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತು ಆದರೆ ದಾಖಲಾತಿಗಳ ಬಗ್ಗೆ ಗೊತ್ತಿಲ್ಲ.

ನಿ.ಪಿ.11 ರ ದಾವಾ ಆಸ್ತಿಯ ಉತ್ತರಕ್ಕೆ ಸಿಂಗಪ್ಪ ಮತ್ತು ಪ್ರತಿವಾದಿಗಳ ಆಸ್ತಿ ಎಂದು ನಮೂದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಜಮೀನು ಇರುವುದು ಎನ್ನುತ್ತಾರೆ. ನಿ.ಪಿ.11 ರ ದಾವಾ ಆಸ್ತಿಯ ಉತ್ತರಕ್ಕೆ ತೋರಿಸಿರುವ ಚೆಕ್ ಬಂದಿ ತಪ್ಪಾ ಎಂದರೆ ಸಾಕ್ಷಿಯು ಅದರಲ್ಲಿ ಏನು ತೋರಿಸಿರುತ್ತಾರೊ ನನಗೆ ಗೊತ್ತಿಲ್ಲ, ಆದರೆ ಉತ್ತರಕ್ಕೆ ಸಿಂಗಪ್ಪ ಮತ್ತು ನಮ್ಮ ಜಮೀನು ಎನ್ನುತ್ತಾರೆ.

ದಾವಾ ಆಸ್ತಿಯ ಉತ್ತರಕ್ಕೆ ಪ್ರತಿವಾದಿಗಳ ಸ್ವತ್ತು ಸರ್ವೆ ನಂಬರ್ 81/ಪಿ14 ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಇರುವ ಆಸ್ತಿ ಪ್ರತಿವಾದಿಗಳದ್ದು, ಅದನ್ನು ಒಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ಚೆಕ್ ಬಂದಿ ತೋರಿಸಿರುತ್ತೇನೆಂದರೆ ಸರಿಯಲ್ಲ.

ಪ್ರತಿವಾದಿಗಳು ನಮಗೆ 2 ಕರಾರು ಪತ್ರ ಬರೆದುಕೊಟ್ಟಿದ್ದರು. ಮೊದಲನೇ ಕರಾರು ಪತ್ರದ ದಿನಾಂಕ ನನಗೆ ಗೊತ್ತಿಲ್ಲ, 2 ನೇ ಕರಾರು ಪತ್ರದ ದಿನಾಂಕ21.08.2002. ಮೊದಲನೇ ಕರಾರುಪತ್ರವನ್ನು ಯಾರು ಬರೆದುಕೊಟ್ಟಿದ್ದರು ಎಂಬುದು ನನಗೆ ಗೊತ್ತು, ಆ ಪತ್ರ ನಮ್ಮ ಹತ್ತಿರ ಇಲ್ಲ.

ಮೊದಲನೇ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಕ್ರಮ ಕೈಗೊಂಡಿಲ್ಲ 2 ನೇ ಕರಾರು ಪತ್ರದಲ್ಲಿ ಮೊದಲನೇ ಕರಾರು ಪತ್ರದ ಬಗ್ಗೆ ಬರೆದಿಲ್ಲ

ನಾಗೇಶ್ ಬಿನ್ ವೆಂಕಟರಾಯಪ್ಪ ಎಂದರೆ ನನ್ನ ಅಣ್ಣ. ನಾನು ಮತ್ತು ನನ್ನ ಅಣ್ಣ ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದರೆ ಸರಿ.

ಸರ್ವೆ ನಂಬರ್ 81/ಪಿ14 ನಮಗೆ ಸೇರಿದ್ದು ಅಲ್ಲ. ಸರ್ವೆ ನಂಬರ್ 81/ಪಿ14 ಕ್ಕೆ ಸಂಬಂಧಿಸಿದಂತೆ ಆರ್.ಆರ್.ಟಿ. ಪ್ರಕರಣ ತಹಶೀಲ್ದಾರ್ ರವರ ಹತ್ತಿರ ನಡೆಯುತ್ತಿದೆ ಎಂದರೆ ಸರಿ.

ಈ ದಾವೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಅಂತ ಆರ್.ಆರ್.ಟಿ. ಪ್ರಕರಣದಲ್ಲಿ ನನ್ನ ಅಣ್ಣ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಖಾತೆ ಮಾಡಬಾರದು ಎಂದು ಅರ್ಜಿ ಸಲ್ಲಿಸಿರುತ್ತೇವೆ ಎನ್ನುತ್ತಾರೆ. ಈ ದಾವೆಯ ಸಂಖ್ಯೆ 81/ಪಿ36, ಆರ್.ಆರ್.ಟಿ. ಪ್ರಕರಣದ ಆಸ್ತಿಯ ಸರ್ವೇ ನಂಬರ್ 81/ಪಿ14 ಎಂದರೆ ಸರಿ.

ಸರ್ವೇ ನಂಬರ್ 81/ಪಿ14 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ತಕರಾರು ಅರ್ಜಿಯನ್ನು ನಾವು ಕೊಟ್ಟಿದ್ದರಿಂದ ಪ್ರತಿವಾದಿಗೆ ಖಾತೆ ಆಗಿಲ್ಲ ಎಂದರೆ ಸರಿ.

ಈ ದಾವೆಯಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳು ಯಾವುವು ಎಂಬುದು ನನಗೆ ಗೊತ್ತು. ಅವುಗಳೆಂದರೆ ಕ್ರಯದ ಕರಾರು ಪತ್ರ ಪಹಣಿ ಪತ್ರಿಕೆ, ಜಿ.ಪಿ.ಎ. ಪತ್ರ. ಜಿ.ಪಿ.ಎ.ರವರು ಅಜ್ಜಪ್ಪರವರು ನನ್ನ ತಂದೆಗೆ ಮಾಡಿಕೊಟ್ಟಿರುತ್ತಾರೆ. ಸದರಿ ಜಿ.ಪಿ.ಎ. ನೋಂದಣಿ ಆಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಿ.ಪಿ.ಎ. ಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ತಕರಾರುಗಳ ಬಗ್ಗೆ ನಾನು ಓದಿ ತಿಳಿದುಕೊಂಡಿರುತ್ತೇನೆ.

ಅಸಲು ದಾವಾ ಸಂಖ್ಯೆ 172/2014 ಕ್ಕೂ ಸಲ್ಲಿಸುವುದಕ್ಕಿಂತ ಮುಂಚೆ ಕರಗಪ್ಪರವರು ಮರಣ ಹೊಂದಿದ್ದರು ಎಂದರೆ ಕರಗಪ್ಪ ಯಾರು ಎಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಈ ದಾವೆಯಲ್ಲಿರುವ ಪ್ರತಿವಾದಿಗಳು ಯಾರು ಎಂಬುದು ನನಗೆ ಗೊತ್ತು, ಅವರೆಂದರೆ ಅಜ್ಜಪ್ಪ, ನಾರಾಯಣಸ್ವಾಮಿ ಮತ್ತು ಪವನ್.

3 ನೇ ಪ್ರತಿವಾದಿಯ ತಂದೆಯ ಹೆಸರು ಕರಗಪ್ಪ ಎಂದರೆ ಸರಿ.

ಅಸಲು ದಾವಾ ಸಂಖ್ಯೆ 172/2014 ನ್ನು ನನ್ನ ತಂದೆ ಮೃತ ಕರಗಪ್ಪನ ಮೇಲೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಆ ಪ್ರಕರಣದ ಬಗ್ಗೆ ಗೊತ್ತಿಲ್ಲ ಮತ್ತು ಮಾಹಿತಿ ಇಲ್ಲ ಎನ್ನುತ್ತಾರೆ. ಈ ದಾವೆಯನ್ನು ಸರ್ವೇ ನಂಬರ್ 81 ಎಂದು ನಮೂದಿಸಿ ಹೂಡಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 81 ರ ಜೊತೆಗೆ ಪಿ 36 ಎಂತಲು ಸಹ ನಮೂದಿಸಿರುತ್ತೇವೆ ಎನ್ನುತ್ತಾರೆ.

ನನ್ನ ತಂದೆ ಸಲ್ಲಿಸಿರುವ ವಾದ ಪತ್ರಕ್ಕೂ ಮತ್ತು ನನ್ನ ಮುಖ್ಯವಿಚಾರಣೆಯಲ್ಲಿ ಬರೆದಿರುವ ದಾವಾ ಸ್ವತ್ತಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಎ.ಕೆ.ಹನುಮಕ್ಕರವರಿಗೆ ದಾವಾ ಸ್ವತ್ತು ಮಂಜೂರಾಗಿತ್ತು ಎಂದರೆ ಸಾಕ್ಷಿಯು ಹನುಮಕ್ಕ ಬಿನ್ ಹುಚ್ಚಪ್ಪರವರಿಗೆ ಮಂಜೂರಾಗಿತ್ತು ಎನ್ನುತ್ತಾರೆ. 15 ವರ್ಷಗಳ ಕಾಲ ಆಸ್ತಿಯನ್ನು ಮಾರಾಟ ಮಾಡಬಾರದು ಎಂಬ ಕರಾರಿನ ಮೇರೆಗೆ ಹನುಮಕ್ಕರವರಿಗೆ ಆಸ್ತಿ ಮಂಜೂರಾಗಿರುತ್ತದೆ ಎನ್ನುತ್ತಾರೆ.

ದಾವಾ ಆಸ್ತಿಯ 1 ಎಕರೆ ಜಮೀನು 20 ಲಕ್ಷ ಬೆಲೆಬಾಳುತ್ತದೆ ಎಂದರೆ ಸಾಕ್ಷಿಯು ಈಗ 1 ಎಕರೆಗೆ 6-7 ಲಕ್ಷ ರೂ. ಬೆಲೆಬಾಳುತ್ತದೆ ಎನ್ನುತ್ತಾರೆ. 2000 ನೇ ಇಸವಿಯಲ್ಲಿ ದಾವಾ ಆಸ್ತಿ 1 ಎಕರೆಗೆ 25,000-30,000/- ಬೆಲೆ ಬಾಳುತ್ತಿತ್ತು. 2002 ರಲ್ಲಿ ಸರ್ಕಾರಿ ಚಲಾವಣೆ ಮೇರೆಗೆ 1 ಎಕರೆಯ ಬೆಲೆ 15 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

ಈ ದಾವೆಯ ಬಗ್ಗೆ ನನ್ನ ತಂದೆಗೆ ವೈಯಕ್ತಿಕವಾಗಿ ಹೆಚ್ಚಿಗೆ ಮಾಹಿತಿ ಇದೆ, ಅವರಿಗೆ ಗೊತ್ತಿದ್ದಷ್ಟು ನನಗೆ ಗೊತ್ತಿಲ್ಲ ಎಂದರೆ ಸರಿ.

ಹನುಮಕ್ಕರವರನ್ನು ಎ.ಕೆ.ಹನುಮಕ್ಕ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯು ಆಗ ಏನಂತ ಕರೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ, ಆದರೆ ದಾಖಲಾತಿಗಳಲ್ಲಿ ಅವರ ಹೆಸರು ಹನುಮಕ್ಕ ಬಿನ್ ಹುಚ್ಚಪ್ಪ ಎಂದು ನಮೂದು ಇದೆ ಎನ್ನುತ್ತಾರೆ. ಹನುಮಕ್ಕನವರ ಗಂಡನ ಹೆಸರು ಹುಚ್ಚಪ್ಪ ಎಂದರೆ ಸರಿ. ಹನುಮಕ್ಕನಿಗೆ ಆಂಜಿನಮ್ಮ, ಅಜ್ಜಪ್ಪ ಮತ್ತು ಪಿಳ್ಳಪ್ಪ ಎಂಬ 3 ಜನ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಅಜ್ಜಪ್ಪರವರ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ

ಅಜ್ಜಪ್ಪನವರಿಗೆ ನಾರಾಯಣಪ್ಪ, ಕರಗಪ್ಪ ಮತ್ತು ಅಮರವತಮ್ಮ ಎಂಬ ಮಕ್ಕಳು ಎಂದರೆ ಸರಿ. ಹನುಮಕ್ಕ ಕೋಂ ಹುಚ್ಚಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹನುಮಕ್ಕರವರಿಗೆ ಇಬ್ಬರು ಗಂಡಂದಿರು, ಅವರ ಒಬ್ಬ ಮಗ ಅಜ್ಜಪ್ಪ ಎಂಬುದು ಮಾತ್ರ ನನಗೆ ಗೊತ್ತು ಉಳಿದಿದ್ದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

ಕರಗಪ್ಪರವರನ್ನು ರಂಗಪ್ಪ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಜ್ಜಪ್ಪ ಮತ್ತು ನಾರಾಯಣಸ್ವಾಮಿ ಮಾತ್ರ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ

3 ನೇ ಪ್ರತಿವಾದಿ ವಕೀಲರನ್ನು ನೇಮಿಸಿಕೊಂಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**                    **ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.